(ii) re:—Spreading of rinder pest disease in Bangalore City.

ಶ್ರೀ ಕೆ ಹೆಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೇ, ಜಾನುವಾರುಗಳ ದೊಡ್ಡ ರೋಗದಿಂದ ಅನೇಕ ಹಸುಗಳು ಸತ್ತಿರುವ ಬಗ್ಗೆ ಮಾನ್ಯ ಪಶುಸಂಗೋಪನಾ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ವೈ. ರಾಮಕೃಷ್ಣ (ಕಾನೂನು ಮತ್ತು ಪಶುಸಂಗೋಪನಾ ಸಚಿವರು).—

ಜಾನುವಾರುಗಳ ದೊಡ್ಡ ರೋಗದ ಇತಿಹಾಸ:

ಜಾನುವಾರುಗಳ ದೊಡ್ಡ ರೋಗವು ಸೂಕ್ಷ್ಮ ರೋಗಾಣುಗಳಿಂದ (ವೈರಸ್) ಸೀಳು ಗೊರಸುಳ್ಳ ಪ್ರಾಣಿಗಳಿಗೆ ಬರುವ ಅತಿ ತೀವ್ರ ಅಟು ರೋಗ. ಈ ರೋಗವು ಅನಾದಿ ಕಾಲದಿಂದಲೂ ತಲೆದೋರಿ ಲಕ್ಷಾಂತರ ರಾಸುಗಳು ಸಾವಿಗೆ ತುತ್ತಾಗಿವೆ. ಈ ಅತಿ ತೀವ್ರ ರೋಗ ತಡೆಗಟ್ಟಲು ಭಾರತ ಸರ್ಕಾರ ೧೯೫೫ ರಿಂದ ದೊಡ್ಡ ರೋಗ ನಿವಾರಣಾ ಯೋಜನೆಯನ್ನು (ರಿಂಡರ್‌ಪೆಸ್ಟ್ ಎರಾಡಿಕೇಷನ್ ಸ್ಕೀಮ್) ರೂಪಿಸಿ ಇಡೀ ದೇಶದಲ್ಲಿ ಕಾರ್ಯಗತ ಮಾಡಿದೆ. ಕರ್ನಾಟಕ ರಾಜ್ಯದಲ್ಲಿ ೧೯೫೦ ರಿಂದ ೧೯೬೩ ರವರೆಗೆ ಈ ರೋಗ ಕಂಡುಬಂದಿರಲಿಲ್ಲ. ನಂತರ ಈ ರೋಗವು ಹೆಬ್ಬಾಳದ ಮಿಲಿಟರಿ ಫಾರಂನಿಂದ ತಲೆದೋರಿತು. ಇದಕ್ಕೆ ಕಾರಣ ವಿೀರ್ತನಲ್ಲಿ ಇರುವ ಮಿಲಿಟರಿ ಫಾರಂನಿಂದ ತಂದ ಎಮ್ಮೆಗಳ ಮೂಲಕ ಈ ಜಾಡ್ಯ ಇಲ್ಲಿ ಹರಡಿತು. ಅಂದಿನಿಂದ ಅಂದರೆ ೩೦-೧೧-೬೩ ರಿಂದ ಹೆಬ್ಬಾಳದ ಮಿಲಿಟರಿ ಫಾರಂ ಪಕ್ಕದ ಕೊಡಗಹಳ್ಳಿ, ಹೆಬ್ಬಾಳದ ಮೂಲಕ ಈ ರೋಗ ಹರಡಿ ಇಡೀ ಬೆಂಗಳೂರಿನಲ್ಲಿ ತಲೆದೋರಿ ಸಾವಿರಾರು ಪ್ರಾಣಿಗಳು ಸತ್ತವು. ಅಂದಿನಿಂದಲೂ ಈ ರೋಗವನ್ನು ಪೂರ್ತಿಯಾಗಿ ನಿರ್ಮೂಲನ ಮಾಡಲು ಆಗದಿದ್ದರೂ ಈ ರೋಗದ ತೀವ್ರತೆ ಬಹಳ ಕಡಿಮೆಯಾಗಿದೆ.

ಇಲಾಖೆಯವರು ಕೈಗೊಂಡಿರುವ ಕಾರ್ಯಕ್ರಮಗಳು :

ಬೆಂಗಳೂರಿನ ಪಶು ಪಾಲನಾ ಇಲಾಖೆಯ ವಿಶೇಷ ಸಿಬ್ಬಂದಿಯವರಿಂದ ಬೆಂಗಳೂರಿನ ಎಲ್ಲ ಕಡೆ ಇರುವ ರಾಸುಗಳಿಗೆ ಚುಚ್ಚು ಮದ್ದನ್ನು ಹಾಕುತ್ತಾ ಬರಲಾಗಿದೆ. ಕೆಲವೆಡೆಗಳಲ್ಲಿ ಈ ರೋಗ ಚುಚ್ಚು ಮದ್ದು ಹಾಕದ ಪ್ರಾಣಿಗಳಲ್ಲಿ ಕಾಣಿಸಿಕೊಳ್ಳುತ್ತಿದೆ. ಬೆಂಗಳೂರಿನಲ್ಲಿ ಈ ರೋಗವು ಇನ್ನೂ ಆಗಾಗ ತಲೆ ಎತ್ತಲು ಕಾರಣ ಏನೆಂದರೆ ಈ ಪಟ್ಟಣದಲ್ಲಿ ಅತಿ ಹೆಚ್ಚಾಗಿ ಮಿಶ್ರತಳಿ ರಾಸುಗಳಿವೆ. ಇಂತಹ ಉತ್ತಮ ರಾಸುಗಳಿಗೆ ಈ ರೋಗ ವಿಪರೀತವಾಗಿ ತಗುಲಿ ಹೆಚ್ಚು ಸಾವನ್ನು ಉಂಟುಮಾಡುತ್ತದೆ. ಸ್ಥಳೀಯ ರಾಸುಗಳು ಮತ್ತು ಕೆಳಮಟ್ಟದ ಮಿಶ್ರತಳಿಗಳಿಗೆ ಸೂಕ್ತ ಚಿಕಿತ್ಸೆಯನ್ನು ಕೊಟ್ಟರೆ ಬದುಕುತ್ತವೆ. ಆದರೂ ಅಂಥಹ ರಾಸುಗಳು ಲಸಿಕೆ ಹಾಕದ ಪ್ರಾಣಿಗಳೊಂದಿಗೆ ಇದ್ದರೆ ಅವುಗಳಿಗೆ ರೋಗ ತಗಲುವ ಸಾಧ್ಯತೆ ಇದೆ. ಪಟ್ಟಣದ ಎಲ್ಲ ಪ್ರಾಣಿಗಳಿಗೆ ಚುಚ್ಚು ಮದ್ದನ್ನು ಹಾಕಿಸಿದರೆ ಈ ರೋಗವನ್ನು ನಿರ್ಮೂಲನ ಮಾಡಲು ಸಾಧ್ಯ. ಹೊಸದಾಗಿ ನೆರೆ ರಾಜ್ಯದಿಂದ ವ್ಯಾಪಾರಕ್ಕೆ ತರತಕ್ಕ ಪ್ರಾಣಿಗಳೂ, ಕಸಾಯಿಖಾನೆಗೆ ತರುವ ಕುರಿ, ಮೇಕೆ, ಹಂದಿ, ಮುಂತಾದವುಗಳಿಂದ ಈ ರೋಗವು ಬರುತ್ತದೆ. ಕೆಲವು ಗೋಪಾಲಕರು ಗಬ್ಬದ ಕಡಸುಗಳಿಗೂ ಮತ್ತು ಹೆಚ್ಚು ಹಾಲು ಕೊಡುವ ಹಸುಗಳಿಗೆ ಈ ಲಸಿಕೆಯನ್ನು ಹಾಕಿದರೆ ಕಂದು ಹಾಕುತ್ತವೆ ಹಾಗೂ ಹಾಲು ಕಡಿಮೆ ಯಾಗುವುದೆಂಬ ಶಂಕೆಯಿಂದ ಇಲಾಖಾ ಅಧಿಕಾರಿಗಳು ಬಂದಾಗ ಹಾಕಿಸುವುದಿಲ್ಲ. ಇದರಿಂದ ರೋಗ ನಿವಾರಣೆ ಕಂಠಿತವಾಗುತ್ತದೆ.

ಜಾನುವಾರುಗಳ ಮರಣದಿಂದ ನಷ್ಟ :

ಹಿಂದಿನಿಂದಲೂ ಆಗಾಗ ಈ ರೋಗ ಕಂಡುಬರುತ್ತಲೇ ಇದೆ. ತಾರೀಖು ೧-೪ ೧೯೮೦ ರಿಂದ ಈ ವರೆವಿಗೂ ಈ ಕೆಳಕಂಡ ಸ್ಥಳಗಳಲ್ಲಿ ಈ ರೋಗವು ಕಂಡು ಬಂದಿದೆ.

೧) ರಾಮಕೃಷ್ಣ ಬ್ಲಾಕ್, ಶೇಷಾದ್ರಿಪುರಂ ೯-೫ ೮೦ ರಿಂದ

೨) ಆನಂದಪುರ, ಚಾಮರಾಜಪೇಟೆ ೨೩-೫-೮೦ ರಿಂದ

೩) ಆಂಜನಪ್ಪ ಗಾರ್ಡನ್, ಚಾಮರಾಜಪೇಟೆ ೮-೬-೮೦ ರಿಂದ

೪) ಸಾರಕ್ಕಿ, ಜಯನಗರ ೩೦-೫-೮೦ ರಿಂದ

೫) ರಾಜಮಹಲ್ ಗುಟ್ಟಹಳ್ಳಿ ೩೧-೫-೮೦ ರಿಂದ

೬) ಈಜೀಪುರ ೩-೬-೮೦ ರಿಂದ

ಕಾಯಿಲೆಗೆ ತುತ್ತಾದ ಪ್ರಾಣಿಗಳ ಸಂಖ್ಯೆ ೧೧೭

ಸತ್ತ ಪ್ರಾಣಿಗಳು ೭೪

ಚಿಕಿತ್ಸೆ ಪಡೆಯುತ್ತಿರುವ ಪ್ರಾಣಿಗಳು ೨೪

ರೋಗ ತಡೆಗಟ್ಟಲು ಹಾಕಿಕೊಂಡ ಕಾರ್ಯಕ್ರಮಗಳು :

೧) ದೊಡ್ಡ ರೋಗದ ಲಸಿಕೆಯನ್ನು ಇಜತ್ ನಗರ (ಉತ್ತರ ಪ್ರದೇಶ)ದಿಂದ ೨,೮೫,೦೦೦ ಪ್ರಾಣಿಗಳಿಗಾಗುವಷ್ಟನ್ನು ವಿಮಾನದ ಮುಖಾಂತರ ೫-೬-೮೦ ರಂದು ತರಿಸಲಾಗಿದೆ.

೨) ತೀವ್ರತರದಲ್ಲಿ ಬೆಂಗಳೂರಿನಲ್ಲಿರತಕ್ಕ ಎಲ್ಲಾ ಪ್ರಾಣಿಗಳಿಗೂ ಲಸಿಕೆಯನ್ನು ಗೋಪಾಲಕರ ಮನೆ ಮನೆಯಲ್ಲೇ ಹಾಕಲು ವಿಶೇಷ ಸಿಬ್ಬಂದಿ ಮತ್ತು ವಾಹನಗಳನ್ನು ವ್ಯವಸ್ಥೆ ಮಾಡಲಾಗಿದೆ.

ಸಹಾಯಕ ನಿರ್ದೇಶಕರು;	ಪಶುವೈದ್ಯರು:	ಜಾನುವಾರು ಪರೀಕ್ಷಕರು:	ವಾಹನಗಳು:
೩	೫	೨೦	೫

ಈ ಸಿಬ್ಬಂದಿ ಜೊತೆಗೆ ಬೆಂಗಳೂರು ನಗರದಲ್ಲಿರತಕ್ಕ ಎಲ್ಲಾ ಆಸ್ಪತ್ರೆಗಳ ಸಿಬ್ಬಂದಿಯವರು ಸಹಾ ಈ ಕೆಲಸದಲ್ಲಿ ನಿರತರಾಗಿದ್ದಾರೆ. ೧-೪-೮೦ ರಿಂದ ೨೦೦೩ ಪ್ರಾಣಿಗಳಿಗೆ ಈ ಹಿಂದೆ ಲಸಿಕೆ ಹಾಕದವುಗಳನ್ನು ಪತ್ತೆ ಹಚ್ಚಿ ಹಾಕಲಾಗಿದೆ. ಇದರ ಜೊತೆಗೆ ದೈನಂದಿನ ಪತ್ರಿಕೆಗಳ ಮತ್ತು ಆಕಾಶವಾಣಿಯ ಮುಖಾಂತರ, ಹಾಗೂ ಪಶು ವೈದ್ಯರು ನೇರವಾಗಿ ಮನೆ ಮನೆಗೆ ಹೋಗಿ ಪ್ರಚಾರ ಮಾಡುತ್ತಿದ್ದಾರೆ.

೩) ಕಾಯಿಲೆ ಪ್ರಾಣಿಗಳ ಚಿಕಿತ್ಸೆ : ಈ ರೋಗವು ತೀವ್ರವಾಗಿ ಹರಡುವುದರಿಂದ ಜಾನುವಾರುಗಳನ್ನು ಗೋಪಾಲಕರ ಮನೆಯಲ್ಲೇ ಬೇರೆ ಇಟ್ಟು ಉಚಿತ ಚಿಕಿತ್ಸೆ ಕೊಡಲಾಗುತ್ತದೆ. ಸರಾಸರಿ ಪ್ರಾಣಿ ಒಂದಕ್ಕೆ ೪೦೦ ರಿಂದ ೬೦೦ ರೂಪಾಯಿಗಳಷ್ಟು ಔಷಧಗಳನ್ನು ಉಪಯೋಗಿಸಲಾಗುತ್ತದೆ. (ಟೆಟ್ರಾಮೈಸಿನ್, ಡೆಕ್ಸಾಟ್ರಿಯಸ್, ಸಲ್ಫಾ ಮತ್ತಿತರ ಔಷಧಗಳು) ಈ ರೋಗ ಔಷಧಗಳಿಂದ ಗುಣ ಮಾಡಲು ಸಾಧ್ಯವಿಲ್ಲದಿದ್ದರೂ ಕೆಲವು ಸ್ಥಳೀಯ ಪ್ರಾಣಿಗಳೂ ಮತ್ತು ಕೆಳವರ್ಗದ ವಿಶ್ರತಳಿ ರಾಸುಗಳು ಚೇತರಿಸಿಕೊಳ್ಳುತ್ತವೆ. ಆದರೂ ಇಂತಹ ಪ್ರಾಣಿಗಳನ್ನು ಚುಚ್ಚಮದ್ದು ಪಡೆಯಲ್ಪಡದ ಪ್ರಾಣಿಗಳೊಂದಿಗೆ ಬಿಟ್ಟರೆ ಅವುಗಳಿಗೆ ರೋಗ ಹರಡುವ ಸಂಭವ ಇದೆ.

ಸತ್ತ ಪ್ರಾಣಿಗಳ ವಿಲೇವಾರಿ : ಗೋಪಾಲಕರು ಸತ್ತ ಪ್ರಾಣಿಗಳ ಚರ್ಮದ ಹಣಕ್ಕಾಗಿ ನಿರ್ಜನ ಪ್ರದೇಶಗಳಲ್ಲಿ ಸಾದರು ಉಳಿದ ಅವಶೇಷಗಳನ್ನು ಬಿಟ್ಟು ಹೋಗುತ್ತಿದ್ದರು. ಇದರಿಂದ ರೋಗ ಹರಡಿದ್ದೂ ಅಲ್ಲದೆ ಜನಗಳ ಆರೋಗ್ಯಕ್ಕೆ ತೊಂದರೆ ಉಂಟಾಗಿದೆ ನಾಯಿ ಹದ್ದುಗಳು ತಿಂದು ಹೆಚ್ಚಾಗಿ ರೋಗ ಪ್ರಸಾರವಾಯಿತು. ಈ ತೊಂದರೆಯನ್ನು ತಡೆಗಟ್ಟಲು ಬೆಂಗಳೂರು ಕಾರ್ಪೊರೆಷನ್ ಅಧಿಕಾರಿಗಳೊಂದಿಗೆ ಸಮಾಲೋಚನೆಮಾಡಿ ವಾಹನ ಸೌಲಭ್ಯವನ್ನು ಏರ್ಪಡಿಸಿ ಸೂಕ್ತರೀತಿಯಲ್ಲಿ ಕೋರಮಂಗಲದಲ್ಲಿ ಹೂಳಲು ವ್ಯವಸ್ಥೆ ಮಾಡಲಾಗಿದೆ.

ರೋಗ ನಿವಾರಣೆ ಮಾಡಲು ಕ್ರಮ ; ಪ್ರತಿಯೊಬ್ಬ ಗೋಪಾಲಕನೂ ಹೊಸದಾಗಿ ತಂದ ರಾಸುಗಳನ್ನು ತಪ್ಪದೆ ಪಶುವೈದ್ಯರಿಗೆ ತೋರಿಸಿ ಲಸಿಕೆ ಹಾಕಿಸಿಕೊಳ್ಳಬೇಕು ಅಧಿಕೃತ ಪಶು ವೈದ್ಯಾಧಿಕಾರಿಗಳಿಂದಲೆ ಚುಚ್ಚುಮದ್ದನ್ನು ಹಾಕಿಸಿಕೊಳ್ಳಬೇಕು. ಗೋಪಾಲಕರ ಮನೆಗೆ ಚುಚ್ಚುಮದ್ದಿನ ಸಿಬ್ಬಂದಿಯವರು ಪ್ರಾರಂಭಕಾಲದಿಂದ ಹಾಗೂ ಸಂಜೆ ೫ ರಿಂದ ೬ ಗಂಟೆಯವರೆವಿಗೆ ಬರುತ್ತಾರೆ. ಚುಚ್ಚುಮದ್ದು ಹಾಕಿದ ಪ್ರಾಣಿಗೆ ಆ ಬಗ್ಗೆ ಗುರುತಿನ ಪದ್ಧತಿಯನ್ನು ಹಾಕಿಸಿ, ಲಸಿಕೆ ಪ್ರಮಾಣವನ್ನು ನೀಡಲಾಗುವುದು.

ಪ್ರಾಣಿಗಳ ಜೀವವಿಮೆ ಮಾಡಿದಲ್ಲಿ ದೊಡ್ಡ ರೋಗದಿಂದ ಪ್ರಾಣಿಗಳಿಗೆ ಪರಿಹಾರ ದೊರೆಯುತ್ತದೆ.

ಕಾಯಿಲೆ ಕಂಡೊಡನೆ ಈ ಕೆಳಕಂಡ ದೂರವಾಣಿ ಸಂಬರುಗಳಿಗೆ ತಿಳಿಸಿದಲ್ಲಿ ಸೂಕ್ತ ವ್ಯವಸ್ಥೆ ಮಾಡಲಾಗುವುದು.

೧) ಸಿಟಿ ಪಶುವೈದ್ಯ ಆಸ್ಪತ್ರೆ ೬೦೦೯೫೫

೨) ದಂಡು ಪಶುವೈದ್ಯ ಆಸ್ಪತ್ರೆ ೨೪೨೨೧೧

ಸತ್ತ ಪ್ರಾಣಿಗಳ ವಿಲೇವಾರಿ ಬಗ್ಗೆ ಕಾರ್ಪೊರೇಷನ್‌ನ ಈ ನಂಬರ್‌ಗೆ ತಿಳಿಸಬೇಕು. ೨೭೭೭೭.

ಗೋಪಾಲಕರು ಈ ಪಟ್ಟಣಕ್ಕೆ ಹೊರಗಿನಿಂದ ಪ್ರಾಣಿಗಳನ್ನು ತರಲೂ ಮತ್ತು ಹೊರಗಡೆ ಮಾರಲು ಈ ರೋಗ ನಿರ್ಮೂಲನವಾಗಿದೆ ಎಂದು ಘೋಷಿಸುವವರೆಗೂ ತಡೆಯಲಾಗಿದೆ.

ಎಲ್ಲಾ ಗೋಪಾಲಕರೂ ಇಲಾಖೆಯ ಸಿಬ್ಬಂದಿಯೊಡನೆ ಸಹಕರಿಸಿದರೆ ಈ ರೋಗವನ್ನು ಪೂರ್ಣವಾಗಿ ಹತೋಟಿಗೆ ತರಲು ಸಾಧ್ಯವಿದೆ.

ಶ್ರೀ ಕೆ ಹೆಚ್. ಹನುಮೇಗೌಡ.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಚಿವರ ಹೇಳಿಕೆ ಕೇಳಿದ ಮೇಲೆ, ಕೂಡಲೆ ಸೂಕ್ತ ಕ್ರಮ ತೆಗೆದುಕೊಂಡು ಕಾಯಿಲೆಯನ್ನು ತಡೆಗಟ್ಟಲು ಪ್ರಯತ್ನ ಮಾಡಿದ್ದಾರೆಂದು ಗೊತ್ತಾಗುತ್ತದೆ. ಆದರೆ, ಕಾಯಿಲೆ ಬೇರೆ ಕಡೆ ಹರಡದ ಹಾಗೆ ಯಾವ ಕ್ರಮ ಕೈಗೊಳ್ಳಲಾಗಿದೆ? ಇಲ್ಲಿನ ರೋಗಪೀಡಿತ ಹಸುಗಳು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಅಲ್ಲಿರುವ ಹಸುಗಳಿಗೆ ಈ ಕಾಯಿಲೆಯನ್ನು ಹರಡಿಸದ ಹಾಗೆ ವ್ಯವಸ್ಥೆ ಮಾಡಲಾಗಿದೆಯೆ? ಎಷ್ಟು ದಿವಸಗಳಿಂದ ಕಾಯಿಲೆ ಹತೋಟಿಗೆ ಬಂದಿದೆ ಮತ್ತು ಸದ್ಯಕ್ಕೆ ರೋಗದ ಸೂಚನೆ ಬಗ್ಗೆ ದೂರುಗಳು ಬರುವುದು ನಿಂತಿರುವುದೆ? ಪಕ್ಕದ ಪ್ರದೇಶಗಳಿಂದ ಕಾಯಿಲೆ ಹರಡುವ ಸಂಭವವಿದೆಯೆಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಸಾಮಾನ್ಯವಾಗಿ ಹೆಚ್ಚು ಬೆಲೆಬಾಳುವ ರಾಸುಗಳನ್ನು ಲಾರಿಗಳ ಮೇಲೆ ರಸ್ತೆ ಮುಖಾಂತರ ತರಲಾಗುತ್ತದೆ. ಹಾಗೆ ನಗರದ ಒಳಗಡೆ ಬರುವ ರಾಸುಗಳಿಗೆ ರೋಗ ನಿಯಂತ್ರಿಕ ಚುಚ್ಚು ಮದ್ದನ್ನು ಹಾಕಲು ವ್ಯವಸ್ಥೆ ಮಾಡಲಾಗಿದೆಯೆ? ಕೆಲವೊಂದು ಅವಧಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿರುವ ರಾಸುಗಳಿಗೆ ಕಾಯಿಲೆ ಬಂದಂತೆ ರೋಗ ನಿಯಂತ್ರಕ ಚುಚ್ಚು ಮದ್ದನ್ನು ಹಾಕುವ ವ್ಯವಸ್ಥೆ ಮಾಡುತ್ತಾರೆ. ಅದೇರೀತಿ ಕಾಯಿಲೆಗಳು ಯಾವ ಅವಧಿಯಲ್ಲಿ ಬರುತ್ತದೆಂಬುದನ್ನು ಕಂಡುಹಿಡಿದು ಚುಚ್ಚು ಮದ್ದು ಕೊಡಿಸುವ ವ್ಯವಸ್ಥೆ ಮಾಡಿಸಲಾಗುವುದೆ? ಅಲ್ಲದೆ, ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ ಈ ಕಾಯಿಲೆ ವಿನಾಶದಾರಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಬಂದಿದ್ದರೆ, ಅದನ್ನು ತಡೆಗಟ್ಟಲು ಏನು ವ್ಯವಸ್ಥೆ ಮಾಡಲಾಗಿದೆ?

† ಶ್ರೀ ವೈ. ರಾಮಕೃಷ್ಣ.—ಈ ಕಾಯಿಲೆ ಮೊದಲು ಮೈಸೂರಿನಲ್ಲಿ ಬಂತು. ಅಲ್ಲಿ ಬಹಳ ಜಾನುವಾರುಗಳು ಸತ್ತವು. ನಾನು ಅಲ್ಲಿಗೆ ಖುದ್ದು ಹೋಗಿ, ಅಲ್ಲಿನ ಅಧಿಕಾರಿಗಳೊಡನೆ ಸಂಪರ್ಕ ಬೆಳೆಸಿ, ರೋಗವನ್ನು ತಡೆಗಟ್ಟಲಿಕ್ಕೆ ಮನೆ ಮನೆಗೂ ಸಲಕರಣೆಗಳನ್ನು ಒದಗಿಸಿಕೊಡಲಾಯಿತು. ಈಗ ಅಲ್ಲಿ ರೋಗ ಹತೋಟಿಗೆ ಬಂದಿದೆ. ನಿನ್ನೆ ನನಗೆ ಬಂದ ವರದಿ ಪ್ರಕಾರ ಅಲ್ಲಿ ಯಾವ ಹಸುವೂ ಸತ್ತಿಲ್ಲ. ಮೈಸೂರು ನಗರದಲ್ಲಿ ಕಾಯಿಲೆ ಸಂಪೂರ್ಣ ಹತೋಟಿಗೆ ಬಂದಿದೆ. ಆದರೆ, ಇವತ್ತು ಬೆಂಗಳೂರು ನಗರದಲ್ಲಿ ಕಾಯಿಲೆ ಇದೆ. ಈ ಕಾಯಿಲೆ ಹೊರಗಡೆ ಹರಡದ ಹಾಗೆ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೋ ಅವೆಲ್ಲವನ್ನೂ ಕೈಗೊಂಡಿದ್ದೇವೆ. ಇಲ್ಲಿಂದ ಗ್ರಾಮಾಂತರ ಪ್ರದೇಶಗಳಿಗೆ ಕಾಯಿಲೆ ಹರಡದ ಹಾಗೆ ಪ್ರತಿ ಮುಖ್ಯ ರಸ್ತೆಯಲ್ಲೂ ವಿಶೇಷ ಸಿಬ್ಬಂದಿಯನ್ನಿಟ್ಟು ಅಲ್ಲಿ ಬರುವ ಜಾನುವಾರುಗಳನ್ನು ನಗರದೊಳಕ್ಕೆ ಬಿಡುವ ಮೊದಲು ಚುಚ್ಚುಮದ್ದನ್ನು ಹಾಕಲಾಗಿದೆಯೇ ಇಲ್ಲವೆ ಎಂಬುದನ್ನು ಪರೀಕ್ಷಿಸಿ ನೋಡಲಾಗುತ್ತಿದೆ. ಮತ್ತೆ ಇಲ್ಲಿಂದ ಹಸುಗಳನ್ನು ಹೊರಕ್ಕೆ ತೆಗೆದುಕೊಂಡು ಹೋಗದ ಹಾಗೆ ನಿಷೇಧಾಜ್ಞೆ ಮಾಡಲಾಗಿದೆ. ಅಲ್ಲದೆ, ಈ ಪ್ರದೇಶಗಳಲ್ಲಿ ಜಾನುವಾರುಗಳ ಸಂತೆ ವ್ಯವಸ್ಥೆ ಮಾಡಬಾರದೆಂದೂ ಸಹ ತಿಳಿಸಲಾಗಿದೆ. ಇದೆಲ್ಲಕ್ಕಿಂತ ಮಿಗಿಲಾಗಿ ಕಾಯಿಲೆಯಿಂದ ಸತ್ತ ಪ್ರಾಣಿಗಳನ್ನ ಭೂಮಿ ಮೇಲೆ ಹಾಗೆಯೇ ಬಿಟ್ಟರೆ ಕಾಯಿಲೆ ವಿಪರೀತ ಹರಡುತ್ತದೆಂದು ತಿಳಿದೇ, ನಗರಸಭೆಯನ್ನು ಕರೆಸಿ, ನನ್ನ ಕೊಠಡಿಯಲ್ಲಿ ಸಭೆ ಸೇರಿಸಿ ಮಾತನಾಡಿ, ಅವುಗಳಿಂದ ಒಂದು ವಿಶೇಷ ವಾಹನವನ್ನು ಪಡೆದು, ಅವುಗಳನ್ನು ಕೋರಮಂಗಲ ಬಡಾವಣೆಯಲ್ಲಿ ಹೂಳುವ ವ್ಯವಸ್ಥೆ ಮಾಡಲಾಗಿದೆ. ಇಷ್ಟು ಮಾಡಿದ ಮೇಲೆ ಸಾಮಾನ್ಯವಾಗಿ ಕಾಯಿಲೆ ಹತೋಟಿಗೆ ಬರುತ್ತದೆಂದು ನಾವು ಭಾವಿಸಿದ್ದೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಬೆಂಗಳೂರು ನಗರದಲ್ಲಿ ಸತ್ತ ರಾಸುಗಳನ್ನು ಹೂಳಲು ಮಾಡುವ ವ್ಯವಸ್ಥೆಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸತ್ತ ರಾಸುಗಳಿಗೂ ಮಾಡುವಿರಾ?

ಶ್ರೀ ವೈ. ರಾಮಕೃಷ್ಣ.—ಈಗಾಗಲೇ ಆದೇಶ ಕೊಟ್ಟಿದ್ದೇನೆ. ಗ್ರಾಮಾಂತರ ಪ್ರದೇಶಗಳಲ್ಲೆಲ್ಲೂ ರೋಗ ಹರಡಿಲ್ಲ. ಇತ್ತೀಚೆಗೆ ನಾವು ಸಂಚಾರಿ ಪಶುವೈದ್ಯಶಾಲೆಯನ್ನು ಮಂಜೂರು ಮಾಡಿದ್ದೇವೆ. ಹಿಂದೆ ಈ ಪದ್ಧತಿ ಇರಲಿಲ್ಲ. ಈಗ ಇದನ್ನು ಪ್ರಾರಂಭ ಮಾಡಿರುವುದರಿಂದ ಯಾವುದಾದರೂ ತಾಲ್ಲೂಕು ಅಥವಾ ಗ್ರಾಮದಲ್ಲಿ ಹಸುಗಳಿಗೆ ಸಾಂಕ್ರಾಮಿಕ ರೋಗ ಬಂದರೆ ಸಂಚಾರಿ ಪಶುವೈದ್ಯ ಶಾಲೆಯವರು ಅಲ್ಲಿಗೆ ಹೋಗಿ ಆಗತ್ಯ ತಾರ್ತುಕ್ರಮವನ್ನು ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಲಾಗಿದೆ. ಈಗ ನಾವು ಬೇಕಾದಷ್ಟು ಇನ್ಸುಲೇಷನ್ ದಾಸ್ತಾನು ಇಟ್ಟಿದ್ದೇವೆ : ಎಲ್ಲ ಔಷಧೋಪಚಾರಗಳನ್ನೂ ದಾಸ್ತಾನು ಇಟ್ಟಿದ್ದೇವೆ. ಆದುದರಿಂದ, ಯಾವ ರೈತರೂ ಭಯಪಡುವಂತಿಲ್ಲ.

ಶ್ರೀ ಬಚ್ಚೇಗೌಡ.—ಕಳೆದ ೧೦ ವರ್ಷಗಳಿಂದ ದೊಡ್ಡ ರೋಗವನ್ನು ತಡೆಗಟ್ಟಲಿಕ್ಕೆ ಯಾವ ಯಾವ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ ? ನನ್ನ ದುರಾದೃಷ್ಟ ಏನೆನ್ನೆ ಎರಡು ಹಸುಗಳು ತೀರಿ ಹೋದವು. ಸತ್ತ ಪ್ರಾಣಿಗಳನ್ನು ಸಾಗಿಸುವುದಕ್ಕೆ ಏನೆನ್ನೆಯವರೆವಿಗೂ ಯಾವ ವಿಧವಾದ ಆನುಕೂಲವೂ ಇರಲಿಲ್ಲ. ನಾನು ಟೌನ್‌ಹಾಲ್‌ನಲ್ಲಿ ಹಾಕಿ ಬೇರೆ ಕಡೆ ರವಾನಿಸಬೇಕಾಗಿ ಬಂತು ಈಗ ಸರ್ಕಾರದವರು ಕಾರ್ಪೊರೇಷನ್ನಿನಿಂದ ವ್ಯಾನಿನ ಆನುಕೂಲ ಮಾಡಿಕೊಟ್ಟಿದ್ದೇವೆಂದು ತಿಳಿಸಿದ್ದಾರೆ ಬಹಳ ಸಂತೋಷ. ೧೦ ವರ್ಷಗಳಲ್ಲಿ ದೊಡ್ಡ ರೋಗ ತಡೆಗಟ್ಟಲಿಕ್ಕೆ ಏನೇನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕೆಂದು ಹೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಸ್ವಾಮಿ. ಪಶು ಸಂಪತ್ತು ರೈತನ ಅತ್ಯಮೂಲ್ಯವಾದ ಆಸ್ತಿ. ಪಶು ಸಂಪತ್ತನ್ನು ಕಾಯಿಲೆಯಿಂದ ಉಳಿಸಿ ಬೆಳೆಸಿ ನಿಲ್ಲಿಸಲಿಕ್ಕೆ ಸರ್ಕಾರ ಸಾಕಷ್ಟು ಪ್ರಯತ್ನ ಪಟ್ಟಿದೆ. ಈ ಕಾಯಿಲೆಯು ೧೯೬೩ರಲ್ಲಿ ಪ್ರಥಮವಾಗಿ ಬಂತು. ೧೯೬೫ರಲ್ಲಿ ೧೨೫೯ ಜಾನುವಾರುಗಳಿಗೆ ಈ ರೋಗ ತಗಲಿ ೧೨೪೫ ಜಾನುವಾರುಗಳು ಸತ್ತುಹೋದವು ; ೮೦ ೦೮೦ ಜಾನುವಾರುಗಳಿಗೆ ದೊಡ್ಡ ರೋಗ ನಿರೋಧಕ ಚುಚ್ಚು ಮದ್ದನ್ನು ಹಾಕಲಾಯಿತು. ೬೬ರಲ್ಲಿ ೧೨೧೬ ಜಾನುವಾರುಗಳಿಗೆ ಈ ರೋಗ ತಗುಲಿತು. ೪೪೫ ಜಾನುವಾರುಗಳು ತೀರಿ ಹೋದವು. ೧,೯೧ ೦೮೦ ಜಾನುವಾರುಗಳಿಗೆ ಚುಚ್ಚು ಮದ್ದನ್ನು ಹಾಕಲಾಯಿತು. ೧೯೬೭ ರಲ್ಲಿ ೩೬ ಜಾನುವಾರುಗಳಿಗೆ ಈ ರೋಗ ಬಂತು; ಇದರಲ್ಲಿ ೨೩ ಜಾನುವಾರುಗಳು ಸತ್ತುಹೋದವು; ೩,೧೦ ೯೦೨ ಜಾನುವಾರುಗಳಿಗೆ ಚ ಚ್ಚು ಮದ್ದು ಹಾಕಲಾಯಿತು. ೬೮ರಲ್ಲಿ ದೊಡ್ಡ ರೋಗ ಬರಲಿಲ್ಲ. ೨ ಜಾನುವಾರುಗಳಿಗೆ ಮಾತ್ರ ಈ ರೋಗ ಬಂತು. ಎರಡು ತೀರಿ ಹೋದವು. ೭,೭೩ ೪೦೮ ಜಾನುವಾರುಗಳಿಗೆ ಚುಚ್ಚು ಮದ್ದು ಹಾಕಲಾಯಿತು. ೧೯೬೯ರಲ್ಲಿ ೪೫೭ ಜಾನುವಾರುಗಳಿಗೆ ಈ ರೋಗ ತಗುಲಿತು ಎಲ್ಲಾ ಜಾನುವಾರುಗಳು ತೀರಿಹೋದವು; ೧೯,೬೯,೯೫೫ ಜಾನುವಾರುಗಳಿಗೆ ಚುಚ್ಚು ಮದ್ದು ಹಾಕಲಾಯಿತು ೧೯೭೦ರಲ್ಲಿ ರೋಗ ಬಂದಿಲ್ಲ. ಕೇವಲ ೧೦ ಜಾನುವಾರುಗಳಿಗೆ ಬಂದಿದ್ದು ೧೦ ಮರಣ ಹೊಂದಿದವು., ೨೯,೪೪,೬೨೦ ಜಾನುವಾರುಗಳಿಗೆ ಚುಚ್ಚು ಮದ್ದು ಹಾಕಲಾಯಿತು. ೭೨ರಲ್ಲಿ ೩೪೯ ಜಾನುವಾರುಗಳಿಗೆ ಈ ರೋಗ ತಗುಲಿತು. ಇದರಲ್ಲಿ ೨೦೦ ಜಾನುವಾರುಗಳು ಮರಣ ಹೊಂದಿದವು; ೧೮,೮೦,೭೮೮ ಜಾನುವಾರುಗಳಿಗೆ ಚುಚ್ಚು ಮದ್ದು ಹಾಕಲಾಯಿತು. ೧೯೭೩ರಲ್ಲಿ ಈ ವರ್ಷವನ್ನು ವಿಷಾದಕರವಾದ ವರ್ಷ ಅಂತ ಹೇಳಬೇಕಾಗುತ್ತದೆ. ೫ ೨೨೦ ಜಾನುವಾರುಗಳಿಗೆ ಈ ರೋಗ ಬಂದು. ೪,೨೩೦ ಜಾನುವಾರುಗಳು ಸತ್ತು ಹೋದವು. ೧೭,೬೬,೫೧೮ ಜಾನುವಾರುಗಳಿಗೆ ಚುಚ್ಚು ಮದ್ದು ಹಾಕಲಾಯಿತು. ೭೪ರಲ್ಲಿ ೧೯೨೯ ಜಾನುವಾರುಗಳಿಗೆ ಈ ರೋಗ ಬಂದಾ. ೧೮೯೦ ಜಾನುವಾರುಗಳು ಮರಣ ಹೊಂದಿದವು. ೨೧ ಲಕ್ಷ ಜಾನುವಾರುಗಳಿಗೆ ಚುಚ್ಚು ಮದ್ದು ಹಾಕಲಾಯಿತು ೭೫ರಲ್ಲಿ ೫೮೫ ಜಾನುವಾರುಗಳಿಗೆ ಈ ರೋಗ ಬಂದು, ೨೦೩ ದನಗಳು ತೀರಿಹೋದವು; ೧೫೫ ೫೭,೯೩೭ ಜಾನುವಾರುಗಳಿಗೆ ಚುಚ್ಚು ಮದ್ದು ಹಾಕಲಾಯಿತು. ೧೯೭೬ರಲ್ಲಿ ೨೨೫ ಜಾನುವಾರುಗಳಿಗೆ ಈ ರೋಗ ಬಂದು ೧೩೧೦ ಜಾನುವಾರುಗಳು ತೀರಿಹೋದವು. ನಾಟಿ ಜಾನುವಾರುಗಳಿಗೆ ದೊಡ್ಡ ರೋಗ ಹೆಚ್ಚು ಪ್ರಮಾಣದಲ್ಲಿ ಬರುವುದಿಲ್ಲವೆ ದು ಅಂಕಿಅಂಶಗಳಿಂದ ಗೊತ್ತಾಯಿತು. ೭೭ರಲ್ಲಿ ೨೬೫೯ ಜಾನುವಾರುಗಳಿಗೆ ಈ ಕಾಯಿಲೆ ಬಂದು ೨೩೬ ಜಾನುವಾರುಗಳು ಸತ್ತುಹೋದವು., ೨೮,೬೨ ೪೨೦ ಜಾನುವಾರುಗಳಿಗೆ ಚುಚ್ಚು ಮದ್ದು ಹಾಕಲಾಯಿತು. ೭೮ರಲ್ಲಿ ೩೭೯ ಜಾನುವಾರುಗಳಿಗೆ ಕಾಯಿಲೆ ಬಂದು, ೬೯ ತೀರಿ ಹೋದವು ೨೨ ೯೯.೨೪೦ ಜಾನುವಾರುಗಳಿಗೆ ಚುಚ್ಚು ಮದ್ದು ಹಾಕಲಾಯಿತು. ೭೯ರಲ್ಲಿ ೮೬ ಜಾನುವಾರು ಗಳಿಗೆ ಈ ಕಾಯಿಲೆ ಬಂದು ೪೬ ತೀರಿ ಹೋದವು. ಉಳಿದಂಥ ೪೦ ಜಾನುವಾರುಗಳಲ್ಲಿ ನಾಟಿ ದನಗಳು., ೨೦,೮೦ ೦೪೧ ಜಾನುವಾರುಗಳಿಗೆ ಚುಚ್ಚು ಮದ್ದು ಹಾಕಲಾಯಿತು. ೧೯೮೦ರಲ್ಲಿ ೨೨೮ ಜಾನುವಾರುಗಳಿಗೆ ಈ ದೊಡ್ಡ ರೋಗ ಬಂದು ೧೩೦ ಜಾನುವಾರುಗಳು ತೀರಿಹೋಗಿವೆ. ೨,೫೧,೮೮೫ ಜಾನು

ವರುಗಳಿಗೆ ಚುಚ್ಚು ಮದ್ದು ಹಾಕಲಾಯಿತು. ೧೯೭೧ರಲ್ಲಿ ಅಂದರೆ ಆ ವರ್ಷ ೧೦೨ ಜಾನುವಾರುಗಳಿಗೆ. ಈ ದೊಡ್ಡ ರೋಗ ಬಂದು; ೬೯ ಸತ್ತು ಹೋಗಿವೆ; ೧೭ ಲಕ್ಷ ಜಾನುವಾರುಗಳಿಗೆ ಚುಚ್ಚು ಮದ್ದು ಹಾಕಲಾಗಿದೆ ಈ ರೀತಿ ಪ್ರತಿ ವರ್ಷವೂ ಈ ಮಾರಕವಾದಂಥ ದೊಡ್ಡ ರೋಗ ಬಂದಾಗ ಸರ್ಕಾರ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಲಕ್ಷಾಂತರ ಜಾನುವಾರುಗಳಿಗೆ ಚುಚ್ಚು ಮದ್ದನ್ನು ಹಾಕುವ ಮುಖೇನ ರೈತನ ಅತ್ಯಮೂಲ್ಯವಾದ ಪಶು ಸಂಪತ್ತನ್ನು ಉಳಿಸಲಿಕ್ಕೆ ಪ್ರಯತ್ನ ಮಾಡಿದೆ.

PRESENTATION OF REPORT

Report of the Committee on Subordinate Legi lation.

SRI S. MUNIRAJU.— S r, I present the Second Report of the Committee on Subordinate Legislation.

MR. SPEAKER.—The Report is presented.

LEGISLATIVE BUSINESS

THE MYSORE BETTING TAX (KARNATAKA AMENDMENT) BILL, 1980.

Leave to Introduce

SRI M. VEERAPPA MOILY (Minister for Finence and Planning.–Sir. I beg to move.

"That leave be granted to introduce the Mysore Betting Tax (Karnataka Amendment) Bill, 1980."

MR. SPEAKER.—The question is ;

"That leave be granted to introduce the Mysore Betting Tax (Karnataka Amendment) Bill, 1980."

The motion was adopted and leave was granted

SRI M. VEERAPPA MOILY.— Sir, I beg to introduce the Mysore Betting Tax (Karnataka Amendment Bill, 1980.

MR. SPEAKER.—The Bill is introduced.

Now, the House stands adjourned to meet again at 1 p.m. tomorrow

(The House adjourned at Thirty Minutes past Five of the Clock to meet at One of the Clock. on Wednesday, the Eleventh June, 1980.)

---

* Appendix